**0207** **(A)**

Total No. of Questions—16

Total No. of Printed Pages—4 **Regd. No.** [ | | | | | | | | | ]

**Part II**

# KANNADA, Paper - II

**(Second Language)**

*Time : 3 Hours]* *[Max. Marks : 100*

**I.** (*a*) ಈ ಕೆಳಗಿನ ಪದ್ಯಗಳಲ್ಲಿ ಯಾವುದಾದರೂ ಒಂದರ ಭಾವಾರ್ಥ ಬರೆಯಿರಿ. 1×5=5

ಪೊಸಗಾರ ಸಿಡಿಲ ಮಸಕಮ
ನಸಕಱಿದು ಕೃತಾಂತಜಿಹ್ವೆ ಪೊಡಕರಿಸುವವೋಲ್
ಬೆಸಸು ಬೆಸನೆಂದು ಕರಮ
ರ್ವಿಸಿ ಸನ್ನಿದವಾಯ್ತು ವಿದ್ಯೆ ರಾವಣನಿದಿರೊಳ್ ॥

**ಅಥವಾ**

ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆಹತ್ತಿ ಉರಿದಡೆ ನಿಲಲುಬಾರದು
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೇಲೆವಾಲು ನಂಜಾಗಿ ಕೊಲುವಡೆ,
ಇನ್ನಾರಿಗೆ ದೂರುವೆ ಕೂಡಲ ಸಂಗಮದೇವಾ !

(*b*) ಈ ಕೆಳಗಿನ ಇಬ್ಬರಲ್ಲಿ ಒಬ್ಬ ಕವಿ/ಲೇಖಕರನ್ನು ಪರಿಚಯಿಸಿರಿ : 1×5=5

(1) ಕೆ.ಎಸ್. ನಿಸಾರ್ ಅಹಮದ್

(2) ಕುಮಾರ ವ್ಯಾಸ.

**II.** ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ 20** ವಾಕ್ಯಗಳಲ್ಲಿ ಉತ್ತರಿಸಿರಿ : 1×5=5

(1) 'ಜಾಲಿಯ ಮರದಂತೆ' ಕವನದ ಸಾರಾಂಶವನ್ನು ಸಂಗ್ರಹಿಸಿ ಬರೆಯಿರಿ.

(2) 'ಬೆಳಗು ಜಾವ' ಕವನದಲ್ಲಿಯ ದ.ರಾ. ಬೇಂದ್ರೆಯವರ ಆಶಯಗಳಾವವು? ವಿವರಿಸಿರಿ.

**III.** ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ 20** ವಾಕ್ಯಗಳಲ್ಲಿ ಉತ್ತರಿಸಿರಿ : 1×5=5

(1) ಬಸವಲಿಂಗ ಸಿಟ್ಟುಬರಲು ಕಾರಣವೇನು? ಆತನು ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರವೇನು? ಅದಕ್ಕೆ ಕಾರಣಗಳೇನು? ವಿವರಿಸಿರಿ.

(2) ತಮ್ಮ ಕುಟುಂಬದ ಮೇಲಿನ ಅಪವಾದವನ್ನು ನಿವಾರಿಸಿ ಕೊಳ್ಳುವ ಅವಕಾಶವಿದ್ದರೂ ಜನ್ನಮ್ಮ ನಿರಾಕರಿಸಲು ಕಾರಣವೇನು? ವಿವರಿಸಿ.

**IV.** ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ 20** ವಾಕ್ಯಗಳಲ್ಲಿ ಉತ್ತರಿಸಿ : 1×5=5

(1) 'ಕೃಷ್ಣೇಗೌಡರ ಆನೆ' ಕಥೆಯಲ್ಲಿ ಬರುವ ಭ್ರಷ್ಟ ವ್ಯವಸ್ಥೆಯ ಚಿತ್ರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

(2) ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು?

**V.** ಈ ಕೆಳಗಿನ ನಾಲ್ಕರಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ ಭಾವವನ್ನು ವಿವರಿಸಿ : 2×3=6

(1) ಕಂದರ್ಪ ವಿಮೋಹದಿಂದಗಲ್ಚಿದೆ.

(2) ಧರೆ ಹತ್ತಿ ಉರಿದಡೆ ನಿಲಲುಬಾರದು.

(3) ಅನ್ಯ ಲಿಂಗಗಳ ನೆನೆವನೆ ನಿಮ್ಮ ಭಕ್ತನು.

(4) ಎನ್ನವೊಲು ಮುನ್ನಾರು ನವೆದವರುಂಡು.

**VI.** ಈ ಕೆಳಗಿನ ನಾಲ್ಕರಲ್ಲಿ ಯಾವುದಾದರೂ ಎರಡಕ್ಕೆ ಸಂದರ್ಭ ಸೂಚಿಸಿ ಭಾವವನ್ನು ವಿವರಿಸಿ : 2×3=6

(1) ಅದು ಅವರು ಆವರೆಗೂ ನೋಡಿರದ ಪ್ರಾಣಿ.

(2) 'ಅದೃಷ್ಟವನ್ನೆ' ಅವಲಂಬಿಸಿ ಬದುಕಲು ಸಾಧ್ಯವೇ?

(3) ನಾವು ಪರದೇಶಿಗಳೆಂಬ ಭಾವನೆ ಬರುತ್ತದೆ.

(4) ಪಾವಕ್ಕೆ ಕಮ್ಮಿ ಮಾಡಿದರೆ ಸುಮ್ಮನೆ ಇರ್ತಿಯೇನೋ ನೀನು?

**VII.** ಈ ಕೆಳಗಿನ ನಾಲ್ಕರಲ್ಲಿ ಯಾವದಾದರೂ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ : 2×2=4

(1) ಕುಜನರಾದವರು ಏನೆಂದು ನುಡಿಯುತ್ತಾರೆ?

(2) ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ?

(3) ಸೀತೆಯ ತಲ್ಲಣಕ್ಕೆ ಕಾರಣವೇನು?

(4) ಹಿತ್ತಾಳೆಗಿಂತ ಬಲುಹೀನ ಯಾವುದು?

**VIII.** ಈ ಕೆಳಗಿನ ನಾಲ್ಕರಲ್ಲಿ ಯಾವದಾದರೂ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿರಿ : 2×2=4

(1) ಕುವೆಂಪು ಅವರಿಗೆ ಕನ್ನಡ ಪ್ರೀತಿ ಸ್ಫುರಿಸಿದ್ದು ಹೇಗೆ?

(2) ನದಿಯ ಒಡಲು ಯಾವಾಗ ಪ್ರಕ್ಷುಬ್ಧವಾಗಿರುತ್ತದೆ?

(3) ಕಲಾಂ ಅವರ ಬದುಕಿನ ಮಂತ್ರ ಯಾವುದು?

(4) ಕತೆಯನ್ನು ಯಾವ ರಸಗಳಲ್ಲಿ ಹೇಳಲೆಂದು ಮುದ್ದಣ್ಣ ಕೇಳಿದನು.

**IX.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : 5×1=5

(1) ಸೀತೆಯನ್ನು ರಾವಣ ಎಲ್ಲಿರಿಸಿದ್ದನು?

(2) ತನು ಯಾವಾಗ ಕರಗಬೇಕು?

(3) ಗುರು ಹೇಗೆ ವರ್ತಿಸಬಾರದು?

(4) ದ್ರೌಪದಿಯ ಮುಂದಲೆಯ ಹಿಡಿದವರಾರು?

(5) ಯಾರನ್ನು ಯೋಗಿ ಎನ್ನಬಹುದು.

**X.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : 5×1=5

(1) ಮಾರ್ಷನ ಜೊತೆಗಾರನ ಹೆಸರೇನು?

(2) ಬಸಲಿಂಗನಿಗೆ ಕಾಣಿಸಿಕೊಂಡ ತೆಲಿದರೆ ಯಾವುದು?

(3) ಅದೃಷ್ಟದ ಪ್ರಶ್ನೆ ಬಂದಾಗ ಲೇಖರಿಗೆ ಯಾರು ನೆನಪಾಗುತ್ತಾರೆ?

(4) ಯಾವ ಮರ್ಯಾದೆಯನ್ನು ನಾವು ಮೀರಬಾರದು?

(5) 'ಗುಡ್ಡ' ಹೊಳೆಯಲ್ಲಿ ಯಾವ ಆಟ ಆಡುತ್ತಿದ್ದನು.

**XI.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 5×1=5

(1) ನಿರೂಪಕರ ಕೊಡಲಿಯ ಆಕಾರ ಹೇಗಿತ್ತು?

(2) ಪುಟ್ಟಯ್ಯ ಯಾರು?

(3) ರೇಂಜರ್ ಆನೆಗೆ ಶೂಟ್‌ಮಾಡುವಂತೆ ಯಾರಿಗೆ ಸೂಚಿಸಿದರು?

(4) ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದ.

(5) ನಿರೂಪಕರ ಪ್ರಕಾರ ಮುನ್ಸಿಪಾಲಿಟಿ ಪ್ರೆಸಿಡೆಂಟರ ಕರ್ತವ್ಯ ಯಾವುದು?

**XII.** ಈ ಕೆಳಗಿನ ಛಂದಸ್ಸುಗಳಲ್ಲಿ ಒಂದಕ್ಕೆ ಮಾತ್ರ ಲಕ್ಷಣ ಬರೆಯಿರಿ. 1×5=5

(1) ಅಕ್ಷರಗಳು.

(2) ಲಲಿತರಗಳೆ.

(3) ಶರ ಷಟ್ಪದಿ.

**XIII.** ಈ ಕೆಳಗಿನ ಪದ್ಯಗಳಲ್ಲಿ ಒಂದಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಣೆ ಮಾಡಿ ಛಂದಸ್ಸಿನ ಹೆಸರು ತಿಳಿಸಿ. 1×5=5

(1) ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವಿದನಂಗಾ.

(2) ಜಸದವ ಪರಾಭವದ ಪತ್ತಗೆಯಂ ದೊರೆವೆತ್ತ ತಮ್ಮ ಮಾ

(3) ಆರಿಗುಸುರುವೆನಾರ ಸಾರುವೆ
ನಾರಿಗೊರಲುವೆ ನಾರಿಗುರುಹುವೆ
ನಾರ ಬೇಡುವೆನಕಟ ಹೆಂಗಸು ಜನ್ಮವನು ನುಡಲಿ|

**XIV.** ಈ ಕೆಳಗಿನ ಮೂರರಲ್ಲಿ ಒಂದರ ಅಲಂಕಾರವನ್ನು ಗುರುತಿಸಿ. 1×5=5

(1) ರಾಮನನ್ನು ಪ್ರೀತಿಯಿಂದ ಸಾಕಿದ್ದು ಹಾವಿಗೆ ಹಾಲೆರೆದಂತಾಯ್ತು.

(2) ಎನ್ನ ದೇಹವೇ ದೇಗುಲ.

(3) ಬರಹೇಳ್ ನಿಕುಂಭನಂ ಶುಂಭನಂ ಜಂಭನಂ|

**XV.** (*a*) ಈ ಕೆಳಗಿನ ಪದಗಳಲ್ಲಿ ಐದಕ್ಕೆ ಅರ್ಥ ಬರೆಯಿರಿ: 5×1=5

(1) ತೊರೆ.

(2) ಲಘು.

(3) ಬೆಸಸು.

(4) ಮಸಕ.

(5) ಜಸ.

(6) ಅಳಿಪು.

(7) ಧರಿತ್ರಿ.

(8) ಬೀಸರ.

(*b*) ಈ ಕೆಳಗಿನ ಎಂಟರಲ್ಲಿ ಆರಕ್ಕೆ ವಿರುದಾರ್ಥ ಬರೆಯಿರಿ: 6×1=6

(1) ಆಗಸ.

(2) ಶಾಶ್ವತ.

(3) ಬಂಧನ.

(4) ಪಾಪ.

(5) ನಲಿವು.

(6) ಕೊಲ್ಲು.

(7) ಸ್ವಾಮಿ.

(8) ಆಯ.

(*c*) ಈ ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿರಿ: 5×1=5

(1) ಮೋಸಗಾರ.

(2) ಚಂದ್ರ.

(3) ಆಚಾರ.

(4) ಭಕ್ತಿ.

(5) ಹೊತ್ತಿಗೆ.

**XVI.** (*a*) ಈ ಕೆಳಗಿನವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ: 2×2=4

(1) ಅಂಕಿತ ನಾಮಗಳು.

(2) ಉದ್ಗಾರ ವಾಕ್ಯಗಳು.

(3) ಯತಿ.

(*b*) ಈ ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪ್ರಬಂಧ ಬರೆಯಿರಿ: 1×5=5

(1) ಪಿತೃಭಕ್ತಿ.

(2) ಸ್ವಾತಂತ್ರ್ಯ.

(3) ಆತ್ಮ ಸೌಂದರ್ಯ.